ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಮ್ಮ ಪ್ರಧಾನಿಗಳೇಕೆ ಮಹಾಮೌನಿ ಬಾಬಾ ಆಗಿದ್ದಾರೆ?*



ಪಾಪ! ಆಡಿಸುವಾಕೆಯ ಕೈಚಳಕದಲಿ ಎಲ್ಲ ಅಡಗಿದೆ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಮದುವೆ ನಂತರ ಹೆಣ್ಣನ್ನು ಮನೆ ತುಂಬಿಸಿಕೊಳ್ಳುವಾಗ ಬಲಗಾಲಿಟ್ಟು ಒಳಗೆ ಬಾ ಎನ್ನುವರಲ್ಲ, ಏಕೆ?*
ಸೇರನ್ನು ಬಲವಾಗಿ ಒದೆಯಲು ಬಲಗಾಲೇ ರೈಟ್ ಲೆಗ್ ಅಂತೇ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಬೆಗ್ಗರ್ಸ್ ಕಾಲೋನಿಗೂ, ಡಾಲರ್ಸ್ ಕಾಲೋನಿಗೂ ವ್ಯತ್ಯಾಸವೇನು?*
ಬೆಗ್ಗರ್ಸ್ ಕಾಲೋನಿಯಲ್ಲಿ ರಸ್ತೆ ಕಿರಿದು, ಮನ ವಿಶಾಲ. ಡಾಲರ್ಸ್ ಕಾಲೋನಿಯಲ್ಲಿ ರಸ್ತೆ ವಿಶಾಲ, ಮನ ಕಿರಿದು!

ಆರಿಫ್, ದಾವಣಗೆರೆ
*ತಲೆ ತಗ್ಗಿಸಿಕೊಂಡು ಹೋಗುವ ಹುಡುಗಿಯರ ಮನಸ್ಸಿನಲ್ಲಿ ಪ್ರೀತಿ- ಪ್ರೇಮದ ಭಾವನೆ ಇರುತ್ತೆ ಅಂತೀರಾ?*
ಎಷ್ಟೋ ಬಾರಿ ತಲೆ ತಗ್ಗುವುದೇ ಪ್ರೀತಿಯಲ್ಲಿ ಹೊಮ್ಮಿದ ಲಜ್ಜೆಯ ಭಾರಕ್ಕೆ ಮೈ ಬಾಯ್!

ಎಸ್.ಆರ್. ಶ್ರೇಯಸ್, ಮೈಸೂರು
*ಅಕಾರ, ಹಕಾರಗಳ ಉಚ್ಚಾರಣೆ ಬಾರದ ಕನ್ನಡ ರಕ್ಷಕ ನಾಯಕರಿಂದ ಕನ್ನಡದ ಉದ್ಧಾರ ಹೇಗೆ ಸಾಧ್ಯ?*



ಭಾಷೆಯ ಚಂದಕ್ಕಿಂತ ಹುಂಡಿಯ ಚಂದಾ ಮುಖ್ಯವಾದರೆ ಸಾಧ್ಯವಿಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು
*ಮಾನವ ಜನ್ಮ ಯಾಕೆ ದೊಡ್ಡದು?*
ಉಕ್ತಿ, ಯುಕ್ತಿ ಇರುವುದರಿಂದ.

ಜಾಕೋಬ್ ಡಿಸೋಜ, ಕುರುವಳ್ಳಿ
*ಪೊಲೀಸ್ ಸ್ಟೇಷನ್‌ಗೂ, ಕೋರ್ಟಿಗೂ ಏನು ವ್ಯತ್ಯಾಸ ಸಾರ್?*
ಎರಡು ಕಡೆಯಲ್ಲೂ P.Cಯೇ ಪ್ರಮುಖ; ಇಲ್ಲಿ ಪೊಲೀಸ್ ಕಾನ್ಸ್‌ಟೇಬಲ್, ಅಲ್ಲಿ ಪೀನಲ್ ಕೋಡ್!

ಎಸ್.ಎ. ಮೋಹನ್‌ರಾಜು, ಶಿವಮೊಗ್ಗ
*ಸಾಮಾನ್ಯವಾಗಿ ಗಂಡು ಪಕ್ಷಿಗಳು ಹೆಣ್ಣು ಪಕ್ಷಿಗಳಿಗಿಂತ ಆಕರ್ಷಕವಾಗಿರುತ್ತವೆ ಎನ್ನುತ್ತಾರಲ್ಲಾ, ನಿಜವೇ?*
ನಿಜ. ಹೆಣ್ಣಿಗೆ ಒಂದೇ ಸಮ ಲೈನ್ ಹೊಡೆಯಲು ಹಾರಾಡುವುದರಿಂದ ಸ್ಲಿಮ್ ಆಗಿ, ಟ್ರಿಮ್ ಆಗಿ ಇರತ್ವೆ.

ಆರ್. ಮಧುಸೂದನ್, ಹಾಸನ
*ಆಗಷ್ಟೇ ಯೌವನಕ್ಕೆ ಕಾಲಿಟ್ಟಿರುವ ಹೆಣ್ಣು ಸೊಳ್ಳೆ ಕಚ್ಚಿದರೆ ನೋವಾಗೋದಿಲ್ವಂತೆ ಹೌದಾ?*
ಹೌದು, ಗಂಡುಸೊಳ್ಳೆಗೆ!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
*ಕಾವ್ಯಕನ್ನಿಕೆಗೂ, ದೇವಕನ್ನಿಕೆಗೂ ಏನು ವ್ಯತ್ಯಾಸ ಸಾಹೇಬ್ರ?*
ಕಾವ್ಯಕನ್ನಿಕೆಯಿಂದ ಕವಿ ಹಾಳು, ದೇವಕನ್ನಿಕೆಯಿಂದ ಋಷಿ ಹಾಳು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಪ್ರತಿ ಅಂಗಡಿಗೂ ವಾರಕ್ಕೊಂದು ದಿನ ರಜೆ; ಆದರೆ ಮದ್ಯದ ಅಂಗಡಿಗೆ ಇಲ್ಲವಲ್ಲಾ...?*
ಅದೇ ರೀತಿ ಪ್ರತಿ ದಿನ ತೆರೆದಿರುವ ಆಸ್ಪತ್ರೆ, ಸ್ಮಶಾನಕ್ಕೆ ಜನರನ್ನು ಒದಗಿಸಲು!

ಹಾಡ್ಯ ಬಿ. ಜಯಾನಂದ, ಮೈಸೂರು
*ಮನೆಯಲ್ಲಿರುವ ವಿವಾಹಿತ ಮಹಿಳೆಯನ್ನು ಹೌಸ್ ವೈಫ್ ಎನ್ನುತ್ತಾರೆ. ಕಚೇರಿಗೆ ಹೋಗುವವಳನ್ನು...?*
ಹೌಸ್ ವೈಫ್ ಎನ್ನುವುದೇ ತಪ್ಪು; ಭಾರತದ ಏಕೈಕ ಹೌಸ್ ವೈಫ್ ಎಂದರೆ ದ್ರೌಪದಿ; ಅವಳು ಇಡೀ ಹೌಸ್‌ಗೇ ವೈಫು!

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ
*ರಾಮ್‌ಜೀ, ನಿಮ್ಮ ಚಾಣಾಕ್ಷ ಉತ್ತರಗಳನ್ನು ಗಮನಿಸಿ ನೀವು ಹಿಂದಿನ ಜನ್ಮದಲ್ಲಿ ಏನಾಗಿದ್ದಿರೆಂದು ಅರಿಯುವ ಬಯಕೆಯಿದೆ. ಸಂಮೋಹಿನಿಗೆ ತಯಾರಿದ್ದೀರಾ?*
ನನಗೇ ಗೊತ್ತಿಲ್ಲ! ದ್ವಾಪರದಲ್ಲಿ ಯಕ್ಷನಾಗಿದ್ದು ಕೊಳದ ಬಳಿ ಬಂದವರಿಗೆಲ್ಲಾ ಪ್ರಶ್ನೆ ಕೇಳಿ ಸಾಯಿಸಿದ ಪಾಪಕ್ಕೇ ಈ ಜನ್ಮದಲ್ಲಿ ಸಿಕ್ಕಸಿಕ್ಕ ಪ್ರಶ್ನೆಗಳಿಗೆಲ್ಲಾ ಉತ್ತರಿಸುವ ಪ್ರಾಯಶ್ಚಿತ್ತ!

## ಬಹುಮಾನಿತ ಪ್ರಶ್ನೆ

ಕಾಳೀಹುಂಡಿ ಶಿವಕುಮಾರ್, ಮೈಸೂರು
*ಗ್ಲಿಸರಿನ್‌ನಿಂದ ಬರುವ ಕಣ್ಣೀರಿಗೂ, ಈರುಳ್ಳಿಯಿಂದ ಬರುವ ಕಣ್ಣೀರಿಗೂ ಇರುವ ವ್ಯತ್ಯಾಸವೇನು?*
ಗ್ಲಿಸರಿನ್ ಕಣ್ಣೀರು ಹಚ್ಚಿಕೊಂಡಾಗ ಮಾತ್ರ; ಈರುಳ್ಳಿ ಕಣ್ಣೀರು ಬೆಲೆ ಕಂಡಾಗಲೂ ಬರುತ್ತದೆ!

ವಿ.ಹಮೀದ್, ವಿಟ್ಲ
*ಪೂರ್ವ ಜನ್ಮ ಎಂದರೆ ಹೇಗಿರುತ್ತದೆ ಸಾರ್?*
ಮುಂದಿನ ಜನ್ಮದಂತೆಯೇ. ಜನ್ಮಗಳೆಲ್ಲಾ ಪಾಪ, ಪುಣ್ಯಗಳ ಬ್ಯಾಲೆನ್ಸ್ ಷೀಟ್‌ಗಳು, ದೇವ ಅಕೌಂಟೆಂಟ್!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ
*ಚಂಡಮಾರುತಗಳಿಗೇಕೆ ಸ್ತ್ರೀಯರ ಹೆಸರಿಡುತ್ತಾರೆ?*
ಸ್ತ್ರೀಯರಷ್ಟೇ ಗಮನ ಸೆಳೆಯುವ ಗುಣ ಇರುವುದರಿಂದ!

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
*ಟಿವಿ ನೋಡುವ ಹುಡುಗಿಯರಿಗೆ ತಮ್ಮ ಸಲಹೆ...?*



ಸ್ಲಿಮ್ ಆಗಿರುವ ಟಿವಿ ನೋಡುತ್ತಲೇ ಕುಳಿತರೆ ಡ್ರಮ್ ಆದೀರಿ ಜೋಕೆ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ
*ಬುದ್ಧಿವಂತ ವಿದ್ಯಾವಂತರೂ ದುಷ್ಟ ಚಟಗಳಿಗೆ ಬಲಿಯಾಗಲು ಕಾರಣವೇನು?*
ಜಾಣ್ಮೆ ಮತ್ತು ಗುಣದ ಕೊರತೆ!

ಮುರಲೀಧರ ಕುಲಕರ್ಣಿ, ಬೀದರ್
*ತಮಿಳುನಾಡಿನಲ್ಲಿ ಜಯಲಲಿತಾ ಅಧಿಕಾರದಲ್ಲಿದ್ದಾಗಲೇ ಕಾವೇರಿ ಸಮಸ್ಯೆ ಭುಗಿಲೇಳಲು ಕಾರಣವೇನು?*
ಮಂಡ್ಯ ಜಿಲ್ಲೆಯ ಹೆಣ್ಣಲ್ಲವೇ... ತವರಿನ ನೀರಿಗಾಗಿ ಹೆಣ್ಣು ಹಾತೊರೆಯುವುದು ಸಹಜ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಮೊದಲ ರಾತ್ರಿ ಕೋಣೆಯೊಳಗೆ ಗಂಡನ್ನು ಮೊದಲು ಬಿಡುವುದರ ರಹಸ್ಯ?*
ಅಖಾಡಾಕ್ಕೆ ಮೊದಲು ಗೂಳಿಯನ್ನೂ, ನಂತರ ಅದನ್ನು ಪಳಗಿಸುವವರನ್ನೂ ಬಿಡುವುದು ಜಗದ ನಿಯಮ!

■ ರಾಮ್